# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂ:258/2017

## ಚಾಸಾ-8/ಪ್ರಾಸಾ-8

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ:**08.04.2026**

| | | |
|---|---|---|
| ಹೆಸರು | : | ಮಹಂತೇಶ್ ತಂದೆ ಪೂಜಾರ ಹನುಮಂತಪ್ಪ |
| ವಯಸ್ಸು | : | **40** ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಮಲೆಮಾಚಿಕೆರೆ ಗ್ರಾಮ , ಜಗಳೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:**

ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ಅಮಾನತು ಪಂಚನಾಮೆ ಆಗಿದ್ದು ಅದನ್ನು ಈಗಗಾಗಲೇ ನಿಪಿ 4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 4 (ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ಎಲ್ಲಿ ಮಾಡಿರುತ್ತೇನೆ ನನಗೆ ಗೋತ್ತಿರುವುದಿಲ್ಲ .ನನಗೆ ಯಾವ ದಿನಾಂಕ , ಯಾವ ಉದ್ದೇಶಕ್ಕೆ ಸಹಿ ಮಾಡಿರುತ್ತೇನೆ ಎಂದು ಗೋತ್ತಿರುವುದಿಲ್ಲ . ಪೋಲಿಸರು ಏನು ಮಾಡಿರುತ್ತಾರೆ ನನಗೆ ಗೋತ್ತಿರುವುದಿಲ್ಲ . ನನ್ನ ಜೋತೆ ಬೇರೆ ಯಾರು ಸಹಿ ಮಾಡಿರುತ್ತಾರೆ , ನನಗೆ ಗೋತ್ತಿರುವುದಿಲ್ಲ . ಸಾಕ್ಷಿಗೆ ಕಡತದಲ್ಲಿರುವ 1 ಪೋಟೋ ತೋರಿಸಲಾಗಿ ಸಾಕ್ಷಿ ಅದರಲ್ಲಿ ತಾನು ಮತ್ತು ಚಾಸಾ-9 ಇದ್ದ ಬಗ್ಗೆ ಒಪ್ಪಿಕೊಂಡಿದ್ದು, ಸದರಿ ಪೋಟೋವನ್ನು ನಿಪಿ 17 ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಎಲ್ಲಿ ಯಾವ ವಿಚಾರವಾಗಿ ತಗೆದಿರುತ್ತಾರೆ ನನಗೆ ಗೋತ್ತಿರುವುದಿಲ್ಲ .

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು).

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿಃ **02.09.2016** ರಂದು ನನ್ನ ಜೋತೆ ಚಾಸಾ-**8** ರವರು ಸಹ ನಿಪಿ **4** ದಾಖಲೆಗೆ ಸಹಿ ಮಾಡುತ್ತಾರೆ ಎಂದರೆ ಸರಿಯಲ್ಲ. ಕಳ್ಳತನ ಮಾಡುವ ವಿಚಾರವಾಗಿ ಆರೋಪಿತರು ನಮ್ಮ ಸಮಕ್ಷಮ ಪೋಲಿಸರಿಗೆ ತೋರಿಸುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ 4 ದಾಖಲೆಯನ್ನು ಶಾಂತನಹಳ್ಳಿ ಗ್ರಾಮದಲ್ಲಿ ಆರೋಪಿ 1 ರವರ ಮನೆ ಹತ್ತಿರ ಪೋಲಿಸರು ನಡೆಸಿದ ಅಮಾನತು ಪಂಚನಾಮೆ ಜರುಗಿಸಿರುತ್ತಾರೆ . ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನಜೋತಗೆ ಚಾಸಾ-9 ರವರು ಇರುತ್ತಾರೆ ಎಂದರೆ ಸರಿ. ನನಗೆ 1 ರಿಂದ 4 ಆರೋಪಿಗಳ ಬಗ್ಗೆ ಗೋತ್ತಿರುವುದಿಲ್ಲ **.** ಆರೋಪಿ 1 ರವರು ನಿಪಿ 4 ಪಂಚನಾಮೆ ಕಾಲಕ್ಕ್ಕೆ ತಮ್ಮಮನೆ ಒಳಗಡೆಯಿಂದ ಒಂದು ಪ್ಲಾಸ್ಟಿಕ್ ಚೀಲವನ್ನು ತಗೆದುಕೊಂಡು ಬರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ತಾನು ನಮ್ಮ ಊರಿನ ಬವಸೇಶ್ವರ ದೇವಸ್ಥಾನದಲ್ಲಿ ಕಳ್ಳತನ ಮಾಡಿದ 16 ಚಿಕ್ಕ ಬೆಳ್ಳ ಲಿಂಗದ ಕಾಯಿಗಳು , 8 ಬೆಳ್ಳಿಯ ಉಡುದಾರಗಳು, 6 ಜೋತೆ ಚಿಕ್ಕ ಬೆಳ್ಳಿಯ ಬಸವಣ್ಣನ ವಿಗ್ರುಹಗಳು , 2 ಜೋತೆ ಬೆಳ್ಳಿಯ ಚಿಕ್ಕ ಕೋಡು , 1 ಬೆಳ್ಳಿಯ ಛತ್ರಿ , 1 ಬೆಳ್ಳಿಯ ದೇವರ ಮುಖ, 15 ಬೆಳ್ಳಿಯ ಚೈನುಗಳು , 1 ಜೋತೆ ಚಿಕ್ಕ ಬೆಳ್ಳಿಯ ದೀಪಗಳು ಇವುಗಳನ್ನು ಪೋಲಿಸರು ವಶಕ್ಕೆ ನೀಡುತ್ತಾನೆ ಎಂದರೆ ಸರಿಯಲ್ಲ. ಸದರಿ ದಿನದಂದು ಪೋಲಿಸರು ಸಂಜೆ 4.30 ರಿಂದ 6.00 ಗಂಟೆಗೆ ನಿಪಿ 4 ಪಂಚನಾೆಮ ಜರುಗಿಸಿ ನಿಪಿ 17 ಪೋಟೋ ತಗೆಯುತ್ತಾರೆ ಎಂದರೆ ಸಾಕ್ಷಿ ಪೋಟೋ ಮಾತ್ರ ತಗೆದಿರುತ್ತಾರೆ ಎಂದು ಹೇಳುತ್ತಾರೆ . ನನಗೆ ಎಲ್ಲಾ ವಿಚಾರ ಗೋತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನ್ಯಾಯಾಲಯದ ಕಡತದಿಂದ ಪೋಲಿಸರಿಗೆ ನೀಡಿದ ಹೇಳಿಕೆಯನ್ನು ಓದಿ**,** ತೋರಿಸಲಾಗಿ ಅದನ್ನು ನಿರಾಕರಿಸಿದ್ದು**,** ಸಾಕ್ಷಿ ನಿರಾಕರಿಸಿದ

ಹೇಳಿಕೆಯನ್ನು ನಿಪಿ **18** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-ಆರೋಪಿಗಳ ಪರ E.N., ವಕೀಲರಿಂದಃ**

ನಾನು ಶಾಂತನಹಳ್ಳಿ ಗ್ರಾಮಕ್ಕೆ ಚಾಸಾ-**9** ರವರ ಜೋತೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಿಪಿ **17** ಫೋಟೋ ಯಾವ ಉದ್ದೇಶಕ್ಕೆ ತಗೆದಿರುತ್ತಾರೆ ಎಂದು ಗೋತ್ತಿರುವುದಿಲ್ಲ ಎಂದರೆ ಸರಿ. ನಾನು ಪೋಲಿಸರು ನಮ್ಮ ಗ್ರಾಮಕ್ಕೆ ಬಂದಾಗ ನಾನು ಇರಲಿಲ್ಲ ಎಂದರೆ ಸರಿ. ಪೋಲಿಸರು ಸಹಿ ಮಾಡು ಎಂದ ಕಾರಣಕ್ಕೆ ನಾನು ಸಹಿ ಮಾಡುತ್ತೇನೆ **,** ಯಾವ ವಿಚಾರಾಗಿ ಎಂದು ನನಗೆ ಗೋತ್ತಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ**.)**

**ಓ ಹೇ ಕೇ ಸರಿ ಇದೆ**

**ಸಹಿ/-**

**ಪ್ರ.ದ.ನ್ಯಾ.ದಂ., ಜಗಳೂರು**